AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ತತ್ವಪದಕಾರ ತಾಳಕೇರಿ ಬಸವರಾಜ : ಜೀವನ – ಸಾಧನೆ

**ಯಮನೂರಪ್ಪ ವಡಕಿ**
ಪಿಎಚ್.ಡಿ. ಸಂಶೋಧನಾರ್ಥಿ
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ– 583 276.
ಮೊ: 97400 41448
E-mail: ypnayaka1448@gmail.com

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತಾಳಕೇರಿ ಎಂಬ ಗ್ರಾಮದಲ್ಲಿ 1930 ರಲ್ಲಿ ಹೂಗಾರ ಮನೆತನದಲ್ಲಿ ಜನಿಸಿದರು. ತಂದೆ ಹೂಗಾರ ಬಾಳಪ್ಪ ತಾಯಿ ಸಾವಿತ್ರಮ್ಮ. ಹೂಮಾಲೆ ಕಟ್ಟುವುದು, ಬಿಡಿ ಹೂವುಗಳನ್ನು ಮಾರುವುದು ಇವರ ಮನೆತನದ ಕಾಯಕವಾಗಿತ್ತು. ಮೂರು ಜನ ಹೆಣ್ಣು ಮಕ್ಕಳು ಹಾಗೂ ನಾಲ್ಕು ಜನ ಗಂಡು ಮಕ್ಕಳಲ್ಲಿ ಎರಡನೇಯವರಾದ ತಾಳಕೇರಿ ಬಸವರಾಜರು ಆಗಿದ್ದನು. ಕಡು ಬಡತನದಲ್ಲಿ ಜನಿಸಿದ ಇವರು ಕಷ್ಟದ ಬದುಕನ್ನು ಕಂಡವರು. ಆದರೂ ತಂದೆ ತಾಯಿ ಪ್ರೀತಿ, ಮಮತೆಯಿಂದ ಬೆಳೆಸಿದರು. ಇವರ ಮನೆಯಲ್ಲಿ ಹೂವಿನ ಪರಿಮಳದೊಂದಿಗೆ ಸಂಗೀತ ಸಾಂಸ್ಕೃತಿಕ ಪರಿಮಳವು ಇತ್ತು ಇದಕ್ಕೆ ಸಾಕ್ಷಿಯಾಗಿ ಬಸವರಾಜ ಅವರ ಅಜ್ಜ, ಮುತ್ತಜ್ಜರು ಬಯಲಾಟ – ದೊಡ್ಡಾಟ ಮುಂತಾದ ಜನಪದ ಕಲೆಗಳಲ್ಲಿ ತೊಡಗಿಸಿಕೊಂಡರು. ಅಲ್ಲದೆ ಇವರ ತಂದೆಯಾದ ಹೂಗಾರ ಬಾಳಪ್ಪನೂ ಸಹ ಜನಪದ ಕಲಾವಿದನಾಗಿದ್ದನು. ಹೆಣ್ಣು ಪಾತ್ರಗಳನ್ನು ಮಾಡುವುದು ನೃತ್ಯ ಮಾಡುವುದಲ್ಲದೆ, ರಂಗಗೀತೆಗಳನ್ನು, ಬಯಲಾಟದ ಪಾತ್ರ ಮಾಡುವುದು, ಕಣಿ ಹೇಳುವುದು ತಬಲಗಳನ್ನು ಸ್ವತಃ ನುಡಿಸುತ್ತಿದ್ದರು. ಹೀಗಾಗಿ ಈ ಸಾಂಸ್ಕೃತಿಕ ವಾತವರಣವು ಬಸವರಾಜ ಅವರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲಿತು. ಬಸವರಾಜ ಅವರು ಸಾಹಿತ್ಯ, ಜನಪದ, ಕಲೆ, ಸಂಗೀತಗಳಲ್ಲಿ ಆಸಕ್ತಿ ವಹಿಸಲು ಕಾರಣವಾಯಿತು.

ತಮ್ಮ ಹುಟ್ಟೂರಿನಲ್ಲಿ ಬಸವರಾಜರು ಓದಿದ್ದು ಎರಡನೇ ತರಗತಿಯವರೆಗೆ ಮಾತ್ರ, ಅವರ ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಅರ್ದಕ್ಕೆ ಬಿಟ್ಟು ಊರಿನಲ್ಲಿ ಗೂವುಗಳನ್ನು ಕಾಯುವ ಕೆಲಸ, ಹೊಲದಲ್ಲಿ ದುಡಿಯುವ ಕೆಲಸವನ್ನು ಮಾಡುತ್ತಿದ್ದರು. ಸಣ್ಣ ವಯಸ್ಸಿನಲ್ಲಿಯೇ ಬಡತನವೆಂಬ ಬೆಂಕಿಯಲ್ಲಿ ಅರಳಿದ ಹೂವು ಎಂದರೆ ತಪ್ಪಾಗಲಾರದು. ಯಾಕೆಂದರೆ ಇವರು ಹಂತ ಹಂತವಾಗಿ ಸಾಹಿತ್ಯ, ಕಲೆ, ಸಂಗೀತ, ಮುಂತಾದ ಕ್ಷೇತ್ರಗಳಲ್ಲಿ ಬೆಳೆದದ್ದು ಗಮನಾರ್ಹದ ಸಂಗತಿಯಾಗಿದೆ. ಬಸವರಾಜ ಅವರು ಪ್ರಾರಂಭದಲ್ಲಿ ಗಿರಿಯಪ್ಪ ಮಾಸ್ತರರ ಆಶ್ರಮದಲ್ಲಿ ಇದ್ದುಕೊಂಡು ಸಂಗೀತ ಅಭ್ಯಾಸ ಪ್ರಾರಂಭಿಸಿದರು. ಬಸವರಾಜರವರ ಬದುಕು ಕಷ್ಟದ ಕಲುಮೆಯಲ್ಲಿ ಎಳೆಯ ವಯಸ್ಸಿನಲ್ಲಿಯೇ ಬೆಳೆಯುತ್ತಿರುವಾಗ ಅದೃಷ್ಟ ಎನ್ನುವಂತೆ ಗದುಗಿನ ಪುಟ್ಟರಾಜ ಗವಾಯಿಗಳ ಅನಿರಿಕ್ಷಿತವಾಗಿ ಪರಿಚಯವಾಗಿತು. ತಾಳಕೇರಿ ಬಸವರಾಜರವರ ದಿಕ್ಕನ್ನು ಬದಲಾಯಿಸಿತು. ಚಿಕ್ಕ ವಯಸ್ಸಿನಲ್ಲಿಯೇ ಇವರಿಗೆ ಸಂಗೀತ ಕಲೆಯ ಬಗ್ಗೆ ಅಪಾರ ಪ್ರೀತಿ ಕಾಳಜಿ ಆಸಕ್ತಿಗಳಿದ್ದವು. ಅಲ್ಲಿಂದ ಗದುಗಿನ ಪಂಚಾಕ್ಷರಿ ಗವಾಯಿಗಳ ನಾಟ್ಯ ಸಂಘವನ್ನು ಸೇರಿಕೊಂಡು ರಂಗ ಕಲಾವಿದನಾಗಿ ಗುರುತಿಸಿಕೊಂಡನು.

ಅಕ್ಷಯಾಂಬರ ಎನ್ನುವ ನಾಟಕದಲ್ಲಿ ದ್ರೌಪದಿ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರ ಮೂಲಕ ಸಾವಿರಾರು ಪ್ರೇಕ್ಷಕರ ಮನ ಗೆದ್ದು ಸೈ ಎನಿಸಿಕೊಂಡು ಬಣ್ಣದ ಬದುಕಿಗೆ ಪಾದಾರ್ಪಣೆ ಮಾಡಿದರು. ಆಗ ಬಸವರಾಜರವರ ವಯಸ್ಸು ಹನ್ನೊಂದು. ಮಂಗಳೂರಿನ ಶಾಖಾ ಮಠಕ್ಕೆ ಬಂದು ಶ್ರೀ ಚನ್ನಮಲ್ಲ ಸ್ವಾಮಿಗಳನ್ನು ಕಂಡಾಗ ಅಲ್ಲಿಂದ ಅವರು ಕರೆದುಕೊಂಡು ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಸನ್ನಿದಿಗೆ ಕರೆತಂದು ಪಂಡಿತ ಪುಟ್ಟರಾಜ ಗವಾಯಿಗಳಿಂದ ಶಿಷ್ಯತ್ವವನ್ನು ಪಡೆದುಕೊಂಡರು. ಮೊದಲು ಪಂಡಿತ ಪುಟ್ಟರಾಜ ಗವಾಯಿಗಳ ನಾಟಕ ಕಂಪನಿಯಲ್ಲಿ ಸೇವೆ ಮಾಡುತ್ತಾ ಹತ್ತಾರು ಹಳ್ಳಿಗಳಲ್ಲಿ ಸುತ್ತಾಡಿದರು. ಕೊನೆಗೆ ಗುರುಗಳ ಆಶೀರ್ವಾದದಿಂದ ಗೆಳೆಯರ ಪ್ರೀತಿ ಸಹಕಾರದಿಂದಾಗಿ ಅವರು 1960ರ ಸಂಧರ್ಭದಲ್ಲಿ ವಿಜಯ ಕುಮಾರ ನಾಟ್ಯ ಸಂಘ ಎಂಬ ಹೆಸರಿನಲ್ಲಿ ನಾಟಕ ಕಂಪನಿಯನ್ನು ಸ್ವತಃ ಹುಟ್ಟುಹಾಕಿದರು. ಈ ಕಂಪನಿಯ ಕಲಾವಿದರಾಗಿ, ಸಂಗೀತ ನಿರ್ದೇಶಕರಾಗಿ, ಮಾಲಿಕರಾಗಿ ಕಾರ್ಯ ನಿರ್ವಹಿಸಿದರು. ಆದರೆ ಅದರ ದುರ್ದೈವದಿಂದಾಗಿ ಕಂಪನಿಯು ನೀರಿಕ್ಷಿಸಿದ ಪ್ರಮಾಣದಲ್ಲಿ ಬೆಳೆಯಲಿಲ್ಲ. ನಾಟಕ ಕಂಪನಿಯ ಬಗೆಗೆ ನೂರಾರು ಬಣ್ಣ ಬಣ್ಣದ ಕನಸುಗಳನ್ನು ಮನದಲ್ಲಿ ಇಟ್ಟುಕೊಂಡಿದ್ದ ಬಸವರಾಜರವರು ನಾಟಕಗಳ ಮುಖಾಂತರ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸಬೇಕು. ಉತ್ತಮವಾದ ನಾಟಕಗಳನ್ನು ನೋಡುವ ಪ್ರೇಕ್ಷಕರಿಗೆ ಮನರಂಜನೆ ನೀಡಬೇಕು ಎಂದುಕೊಂಡಿದ್ದ ಅವರು ಕಂಪನಿ ಮುಚ್ಚುವ ಸ್ಥಿತಿಗೆ ಬಂದೊದಗಿತು. ಕಂಪನಿ ಮುಚ್ಚುವುದಕ್ಕೆ ಹಲವಾರು ಬೇರೆ ಬೇರೆ ಕಾರಣಗಳಿದ್ದರು ಇದಾವುದರ ಬಗ್ಗೆ ತಲೆಕೆಡಿಸಿಕೊಳ್ಳದೆ, ನಿರಾಶರಾಗದೆ ಬಸವರಾಜ ಅವರು ಪುನಃ ಪುಟ್ಟರಾಜ ಗವಾಯಿಗಳ ನಾಟಕ ಕಂಪನಿಗೆ ಬಂದು ಮತ್ತೆ ಸೇರಿಕೊಂಡರು ಈ ಕಂಪನಿಯ ಮುಖಾಂತರ ನಾಡನ್ನು ಸುತ್ತಿದ ಅವರು ಅತ್ಯಂತ ಜನಪ್ರೀಯ ಕಲಾವಿದನಾಗಿ ತಮ್ಮ ಪ್ರತಿಭೆಯನ್ನು ನಾಡಿಗೆ ಪರಿಚಯಿಸಿದನು. ಸತತವಾಗಿ ಇಪ್ಪತ್ತು ವರ್ಷಗಳ ಕಾಲ ಅಲ್ಲಿಯೇ ಕಂಪನಿಯಲ್ಲಿ ಸೇವೆಯನ್ನು ಸಲ್ಲಿಸಿದರು. ಅವರ ಕಲಾ ಪ್ರತಿಭೆಯನ್ನು ಗುರುತಿಸಿ ಅವರನ್ನು ಹರಸಿ ಬಂದ ಪ್ರಶಸ್ತಿ ಎಂದರೆ ನಾಟ್ಯ ಕಲಾರತ್ನ ಪ್ರಶಸ್ತಿ ಇವರಿಗೆ ದೊರಕಿದೆ.

ಇವರು ನಾಟಕಗಳಲ್ಲಿ ಪಾತ್ರ ನಿರ್ವಹಿಸುವುದು ಹೇಗೆಂದರೆ ಯಾವ ಪಾತ್ರಕ್ಕೂ ಹಿಂಜರಿಯದೆ ಪುರುಷರೇ ಮಹಿಳೆಯ ಪಾತ್ರವನ್ನು ನಿರ್ವಹಿಸುವ ಸಂಧರ್ಭವಿತ್ತು ಅಂತಹ ಸಂಧರ್ಭದಲ್ಲಿ ಅವರು ಸವಾಲಿನ ಕೆಲಸವಾಗಿ ಯಾವ ಪಾತ್ರವೆಂದು ಲೆಕ್ಕಿಸದೆ ಎಲ್ಲಾ ಪಾತ್ರಗಳಿಗೆ ಬಣ್ಣ ಹಾಕುವಂತಹ ಮನಸ್ಸು ಅವರದಾಗಿತ್ತು. ಕೊಟ್ಟ ಪಾತ್ರವನ್ನು ಪ್ರೀತಿಯಿಂದ ಸ್ವೀಕರಿಸಿ ಪಾತ್ರಕ್ಕೆ ಜೀವ ತುಂಬುತ್ತಿದ್ದರು. ನೃತ್ಯವನ್ನು ಮಾಡುವುದರ ಮೂಲಕ ತಮ್ಮ ನಿಜವಾದ ಪ್ರತಿಭೆಯನ್ನು ಮೆರೆದು ಪ್ರೇಕ್ಷಕರ ಮನ ಗೆಲ್ಲುತ್ತಿದ್ದರು. ಜೊತೆಗೆ ರಂಗಭೂಮಿಯ ಹಿನ್ನಲೆಯಲ್ಲಿದ್ದುಕೊಂಡು ಹಾಡುತ್ತಿದ್ದರು. ಗಂಡಿನ ಧ್ವನಿಯಿಂದ ಹೆಣ್ಣಿನ ಧ್ವನಿಯನ್ನು ಹಾಡುವುದರ ಮೂಲಕ ಸಾವಿರಾರು ಕಲಾಭಿಮಾನಿಗಳನ್ನು ಮೋಡಿ ಮಾಡುತ್ತಿದ್ದರು. ಪ್ರೇಕ್ಷಕರು ಮತ್ತೊಮ್ಮೆ ಹಾಡಲು ಒತ್ತಾಯಿಸುತ್ತಿದ್ದರು.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಬಸವರಾಜರವರು ಸತಿ ಸುಕನ್ಯಾದಲ್ಲಿ ಸಖಿಪಾತ್ರ, ಹೆಮರೆಡ್ಡಿ ಮಲ್ಲಮ್ಮನ, ನೆಗೆವೆಣ್ಣೆ ನಾಗಮ್ಮ ಮುಂತಾದ ಪಾತ್ರಗಳ ಮೂಲಕ ಆ ವಯಸ್ಸಿನಲ್ಲಿಯೆ ಪ್ರೇಕ್ಷಕರಿಗೆ ಇವರು ಮನೆ ಮಾತಾಗಿದ್ದರು. ಇವರು ಮಾಡಿದ ಇಪ್ಪತ್ತೈದು ನಾಟಕಗಳಲ್ಲಿ ಸ್ತ್ರೀ ಪಾತ್ರಗಳೇ ಅವರಿಗೆ ಅತಿ ಹೆಚ್ಚು ಕೀರ್ತಿಯನ್ನು ತಂದುಕೊಟ್ಟಂತಹ ಪಾತ್ರಗಳಾಗಿವೆ. ಸ್ತ್ರೀ ಪಾತ್ರಗಳ ಮುಖಾಂತರ ಅವರು ಜೀವನದ ಮೌಲ್ಯ, ಆದರ್ಶಗಳನ್ನು ಪ್ರೇಕ್ಷಕ–ರಿಗೆ ಕಟ್ಟಿಕೊಟ್ಟಿದ್ದಾರೆ. ಎಂಬುವುದು ಗಮನಾರ್ಹವಾದ ಸಂಗತಿಯಾಗಿದೆ. ನಾಟಕಗಳಲ್ಲಿ ಅಭಿನಯಿಸುವುದರೊಂದಿಗೆ ಬಿಡುವಿನ ವೇಳೆಯಲ್ಲಿ ಸಂಗೀತಕ್ಕೆ ಬಹಳ ಆಧ್ಯತೆಯನ್ನು ಕೊಡುತ್ತಿದ್ದರು. ಗುರುಗಳು ಹತ್ತಿರ ಬಂದು ಸಂಗೀತ ಪಾಠವನ್ನು ಹೇಳಿಸಿಕೊಳ್ಳುತ್ತಿದ್ದರು. ನಂತರ ನಿರಂತರ ಅಭ್ಯಾಸವನ್ನು ಮಾಡುತ್ತಿದ್ದರು. ಅದರಲ್ಲಿ ಶ್ರದ್ದೆ, ಸೇವ ಮನೋಭಾವ ಹಿಡಿದ ಗುರಿಯನ್ನು ಸಾಧಿಸುವಂತಹ ಛಲ ಅವರಲ್ಲಿ ಅಡಕವಾಗಿತ್ತು ಸಂಗೀತದಲ್ಲಿ ಹಂತ ಹಂತವಾಗಿ ಮೇಲೆ ಬಂದರು. ಅನೇಕ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟಿದ್ದಲ್ಲದೆ ಕರ್ನಾಟಕದಲ್ಲಿ ಅಲ್ಲದೆ ಭಾರತದಲ್ಲಿ ತಮಿಳುನಾಡು, ಆಂದ್ರಪ್ರದೇಶ, ಅಸ್ಸಾಂ, ಕೇರಳ, ಉತ್ತರ ಪ್ರದೇಶ, ಕಾಶ್ಮಿರ, ಹೀಗೆ ಭಾರತದಲ್ಲಿ ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಕರ್ನಾಟಕವನ್ನು ಪ್ರತಿನಿಧಿಸಿ ಕನ್ನಡ ನೆಲದ ಸತ್ವದ ಗುಣವನ್ನು ದೇಶದಲ್ಲಿ ಪಸರಿಸಿದರು. ಅವರ ಪ್ರತಿಭೆ, ಸರಳತೆ, ಸೌಜನ್ಯ, ಅಪರೂಪದ ವ್ಯಕ್ತಿತ್ವ, ಗುರುಗಳಿಗೆ ಮೆಚ್ಚುಗೆಯಾಗಿ ಪುಣ್ಯಾಶ್ರಮದ ಪ್ರಭಾವ ಅವರ ಮೇಲೆ ಸಾಕಷ್ಟಾಗಿದೆ. ಹಾಗೇಯೇ ಪಂಡಿತ ಪುಟ್ಟುರಾಜು ಗವಾಯಿಗಳು ಹಾಗೂ ಶ್ರೀ ಚನ್ನವೀರ ಶಾಸ್ತ್ರಿಗಳು ಅವರ ಪ್ರತಿಯೊಂದು ಕೆಲಸಕ್ಕೂ ಪ್ರೇರಣೆಯನ್ನು ಪಡೆದುಕೊಂಡಿರುವುದನ್ನು ಇಲ್ಲಿ ಕಾಣುತ್ತೇವೆ. ಸುಮಾರು ಆರು ನೂರಕ್ಕೂ ಅಧಿಕವಾಗಿ ಪ್ರಯೋಗಗಳನ್ನು ಕಂಡಿದ್ದ ಹೆಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ ನಾಗಮ್ಮನ ಪಾತ್ರ, ಮಲ್ಲಮ್ಮಳಿಗೆ ಹಿಂಸೆಯನ್ನು ಕೊಡುವಂತಹ ಸನ್ನಿವೇಶಗಳು ತುಂಬಾ ಅರ್ಥಗರ್ಭಿತವಾದ ಪಾತ್ರಕ್ಕೆ ಜೀವ ತುಂಬಿ ಕಲಾತ್ಮಕವಾಗಿ ಪಾತ್ರ ಮಾಡುತ್ತಿದ್ದ ಸಂದರ್ಭದಲ್ಲಿ ಪ್ರೇಕ್ಷಕ ಮಹಿಳೆಯೊಬ್ಬಳು ದಿಢೀರನೆ ರಂಗ ಸಜ್ಜಿಕೆಯ ಮೇಲೆ ಏರಿ ಬಂದು ಅವರ ಕೆನ್ನೆಗೆ ಪಟ ಪಟನೆ ಬಾರಿಸಿದಳು. ಆಗ ಅವರು ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದರು. ಅಂದೇ ತಮ್ಮ ಕಲೆಯನ್ನು ಸಾರ್ಥಕ ಎಂದು ಭಾವಿಸಿದರು. ಎಂಬ ಅಂಶವನ್ನು ಡಾ. ದಸ್ತಗಿರಿ ದಿನ್ನಿಯವರು ಬರೆದ ತಾಳಕೇರಿ ಬಸವರಾಜ ಎಂಬ ಪುಸ್ತಕದಲ್ಲಿ ಅವರ ಮಗ ಸಿದ್ದಲಿಂಗೇಶ್ವರ ಹೇಳಿದ ಪ್ರಸಂಗವನ್ನು ಇಲ್ಲಿ ಪ್ರಸ್ತಕವಾಗಿ ಕಾಣುತ್ತವೆ.

ತಾಳಕೇರಿ ಬಸವರಾಜರವರು ಸಂಸಾರಿಯಾಗಿದ್ದು ಇಬ್ಬರು ಪತ್ನಿಯರನ್ನು ಹೊಂದಿದ್ದು ಮೊದಲನೇ ಹೆಂಡತಿಯಾದ ತಮ್ಮ ಸ್ವಂತ ಅಕ್ಕನ ಮಗಳನ್ನು ಮಾಡಿಕೊಂಡಿದ್ದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳಷ್ಟೆ ಇರುವ ಕಾರಣಕ್ಕಾಗಿ ಎರಡನೇ ಮದುವೆಯನ್ನು ಸಾವಿತ್ರಮ್ಮನವರನ್ನು ಮದುವೆಯಾಗಿ ಇವರಿಗೆ ಶರಣು ಪ್ರಸಾದ, ರಾಜಶೇಖರ, ಸಿದ್ದಲಿಂಗೇಶ್ವರ, ಎಂಬ ಮೂರು ಮಕ್ಕಳು ಹಾಗೂ ಮಹಾನಂದಳೆಂಬ ಒಬ್ಬ ಮಗಳು ಇದ್ದಾಳೆ. ಯಾರಾದರೂ ಕವಿಗಳು ನಿಮ್ಮ ಆಸ್ತಿ ಏನು ಎಂದು ಪ್ರಶ್ನೆ ಮಾಡಿದರೆ “ಒಂದು ಎಕ್ಕರೆ ಹೊಲ, ಒಂದು ಚಿಕ್ಕ ಮನೆ, ದೊಡ್ಡ ಸಂಸಾರ, ಮಕ್ಕಳೆ ನನ್ನ ಆಸ್ತಿ” ಎಂದು ಬಾಯಿ ತುಂಬಾ ನಗು ನಗುತ್ತಾ ಹೇಳುತ್ತಿದ್ದರಂತೆ ಹೀಗೆ ಅವರು ಸಾಹಿತ್ಯ ಕ್ಷೇತ್ರಕ್ಕೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡಿ ಕನ್ನಡಮ್ಮನನ್ನು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ಹೂಗಾರ ಮನೆತನದವರೆಂದು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಹೆಸರು ವಾಸಿಯಾಗಿದ್ದ ಬಸವರಾಜರು ಗದುಗಿನ ಪುಟ್ಟರಾಜ ಗವಾಯಿಗಳ ಆಶೀರ್ವಾದದಿಂದ ಬೆಳೆದು ಅವರು ಸಧ್ಯಕ್ಕೆ ಅವರ ಮನೆತನದ ಹೂಗಾರ ಎಂಬ ಹೆಸರು ಬದಲಾಗಿ ಗವಾಯಿ ಮನೆತನದವರು ಎಂದು ಬದಲಾಯಿಸಿರುವುದನ್ನು ಸ್ವತಃ ನಾನೇ ಕಂಡಿದ್ದೇನೆ. ಹೀಗೆ ತಾಳಕೇರಿ ಬಸವರಾಜರವರು ಆಶುಕವಿಗಳು ಎಂದು ಗುರುತಿಸಿಕೊಂಡಿದ್ದು ಅವರು ‘ಮುದ್ದುಬಸವ’ ಎಂಬ ಅಂಕಿತವನ್ನು ಇಟ್ಟುಕೊಂಡು ತತ್ವಪದಗಳನ್ನು ರಚನೆ ಮಾಡಿದ್ದಾರೆ. ಸಾಹಿತ್ಯ, ಸಂಗೀತ, ರಂಗಭೂಮಿಗೆ ಅವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಅಂತಹ ಪ್ರಶಸ್ತಿಗಳಲ್ಲಿ 1983 ರಲ್ಲಿ ನೀಡಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ನಾಟ್ಯಕಲಾರತ್ನ, ನಾಟ್ಯ ಭೂಷಣ, ರಂಗಭೂಮಿಯ ಚತುರ, ಎಂಬ ಪ್ರಶಸ್ತಿಗಳನ್ನು ಬಸವರಾಜರವರು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.[8] ಹೀಗೆ ಅವರು ಬರೆದಿರುವ ಕಲ್ಯಾಣಗೀತೆ, ಸಂಕಲನದಲ್ಲಿ ಅನೇಕ ಶರಣರ ಕುರಿತಾದ ಭಕ್ತಿ ಗೀತೆಗಳು ಜೋತೆಗೆ ಅವುಗಳಲ್ಲಿ ಕೆಲವು ಮಾತ್ರ ತತ್ವಪದಗಳಿದ್ದಾವೆ. ಇವರ ತತ್ವಪದ ಪ್ರಸಿದ್ದಿ ಪಡೆದ ಹಾಡೆಂದರೆ

ಅನ್ನವು ನಿನ್ನಲ್ಲಿರುವತನಕೆಲ್ಲರು ।
ನನ್ನವರು–ತನ್ನವರು ಎನ್ನುವರು ॥
ಅನ್ನವು ನಿನ್ನಲ್ಲಿ ತೀರಿದ ಮರುದಿನ ।
ನಿನ್ನವರೆನ್ನುವರು ಯಾರಿಹರು ?

ಈ ಪದದ ಪಲ್ಲವಿ ಸುತ್ತ ಮುತ್ತಲಿನ ಗ್ರಾಮಗಳಲ್ಲಿ, ಭಜನಾ ಮೇಳಗಳಲ್ಲಿ ಈ ಪದವನ್ನು ಹಾಡುತ್ತಿದ್ದರು. ಅನ್ನದ ಮಹಿಮೆಯನ್ನು ಇಲ್ಲಿ ಹೇಳಲಾಗಿದೆ. ಅನ್ನ ಎಂಬುವುದು ಇಲ್ಲಿ ಸಂಪತ್ತಾಗಿದೆ. ಅನ್ನ ಸಂಪತ್ತು ಇರುವವರಿಗೆ ಎಲ್ಲಾರು ಇರುತ್ತಾರೆ. ಅದು ತೀರಿದ ಬಳಿಕ ಯಾರು ಸಮೀಪ ಬರುವುದಿಲ್ಲ. ಎನ್ನುವ ನೈಜ ಜೀವನದ ಮತ್ತೊಂದು ತನ್ನ ಅರ್ಥಗರ್ಭಿತವಾದ ತತ್ವದೊಂದಿಗೆ ಅನ್ನದ ಮಹತ್ವವನ್ನು ಜನರಿಗೆ ಭಿತ್ತರಿಸುತ್ತಾನೆ.

ಜೀವನದ ಯಾತ್ರೆಯನು ಮುಗಿಸಿ ಶೃಂಗಾರದಲಿ ।
ಹೆಗಲಪಯಣವ ಬೆಳಸಿ ಹೊರಟ ಮಸಣದ ಮನೆಗೆ ॥
ದುಃಖದುಮ್ಮಾನಗಳ ಸಹಿಸಿ ಸಂಸಾರದಲಿ ।
ಸಾಗಿಹನು ಸಂಭ್ರಮದಿ ಪುರಬೀದಿಯೊಳಗೆ ॥

ಬಸವರಾಜ ಕವಿಯು ಇಲ್ಲಿ ಮನುಷ್ಯನ ಜೀವನಯಾತ್ರೆ ಬಗ್ಗೆ ತಿಳಿಸಿದ್ದಾನೆ. ಮರಣ ಎಂಬುದು ಯಾರನ್ನು ಬಿಟ್ಟಿಲ್ಲ. ಮನುಷ್ಯ ಸತ್ತ ಸಂದರ್ಭದಲ್ಲಿ ಮಂಟಪ ಮಾಡಿ ಹೂವಿನಿಂದ ಶೃಂಗರಿಸಿ ದುಃಖದ ಬದುಕನ್ನು ಕುಟುಂಬಕ್ಕೆ ಕೊಟ್ಟು ಶ್ಲೋಕ ಸಾಗರದಲ್ಲಿರಿಸಿ ಮುಂದೆ ಗಂಡಿನ ಸಾಲು ಹಿಂದೆ ಹೆಣ್ಣುಗಳ ಸಾಲುಗಳೊಂದಿಗೆ ಬಾಜೆ ಭಜನೆಗಳಿಂದ ಮಣ್ಣಿನ ಮನೆಗೆ ಕಳುಹಿಸಿಬರುತ್ತಾರೆ. ಎಂದು ಸತ್ತ ಹೆಣದ ಬಗ್ಗೆ ತಿಳಿಸುತ್ತಾನೆ.

ಗುಡಿಯನ್ನು ಕಟ್ಟಿಸಲು– ಕಳಶವನ್ನು ಕೂಡಿಸಲು

ತೇರನ್ನು ಮಾಡಿಸಲು ಎನ್ನಳವೆ ತಂದೆ
ಕಡು ಬಡವನು ನಾನು, ನಿಮಗೇನು ಮಾಡುವೆನು
ನನದು ಎನ್ನುದೆಲ್ಲಾ ನಿನ್ನದಲ್ಲವೇನು

ಗುಡಿಯನ್ನು ಕಟ್ಟಿಸಲು ಎನ್ನುವ ಈ ಒಂದು ತತ್ವಪದದಲ್ಲಿ  ಬಸವಣ್ಣನವರ ಉಳ್ಳವರು ಶಿವಾಲಯ ಮಾಡುವರಯ್ಯ ಎನ್ನುವ ವಚನದ ಪ್ರಭಾವ ಇದೆ. ದೇವರು ನಿಜವಾದ ಅರ್ಥದಲ್ಲಿ ನಮ್ಮೊಳಗೆ ಇದ್ದಾನೆ. ಅಂತರಂಗದ ಕದವನ್ನು ತೆರೆಯಬೇಕಾಗಿದೆ ಎನ್ನುವ ವಿಚಾರ ಇಲ್ಲಿದೆ. ಜೋತೆಗೆ ಶರಣರು ದೇವಾಲಯದ ಸಂಸ್ಕೃತಿಯನ್ನು ವಿರೋಧಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು ಯತ್ನಿಸಿದ್ದನ್ನು ಇಲ್ಲಿ ವಿವೇಚಿಸಲಾಗಿದೆ.

ಹೀಗೆ ಅನೇಕ ರೀತಿಯ ಹಲವಾರು ತತ್ವಪದಗಳನ್ನು ಸಾಮಾಜಿಕ ಸಂದೇಶವನ್ನು ಜನಸಾಮಾನ್ಯರಿಗೆ ಭಿತ್ತುವ ಕಾರ್ಯ ಮಾಡಿ ಕನ್ನಡ ನಾಡಿಗೆ ಹೆಸರಾಗಿ ಬೆಳೆದು ನಿಂತು ಕೊನೆಯಲ್ಲಿ ತಾಳಿಕೇರಿ ಗ್ರಾಮದಲ್ಲಿ 26–01–2004 ರಂದು ನಿಧನವನ್ನು ಹೊಂದಿ ಮರಳಿ ಬಾರದ ಲೋಕಕ್ಕೆ ತೆರಳಿದರು. ಇತನ ಮಕ್ಕಳು ಹಾಗೂ ಕುಟುಂಬ ವರ್ಗದವರು ತಾಳಕೇರಿ ಗ್ರಾಮದಲ್ಲಿ ವಾಸವಾಗಿರುವುದನ್ನು ಕಾಣುತ್ತೆವೆ. ತಾಳಿಕೇರಿ ಬಸವರಾಜರವರು ರಂಗಕಲಾವಿದರಾಗಿ, ಸಂಗೀತಗಾರರಾಗಿ, ಕಂಪನಿಯ ಮಾಲಿಕರಾಗಿ, ಸೇವೆಯನ್ನು ಸಲ್ಲಿಸುತ್ತಲೇ ಸಾಹಿತ್ಯ ರಚನೆಗೂ ಕೈ ಹಾಕಿದರು. ಅವರ ಜನಪದ, ತತ್ವಪದ ಸಾಹಿತ್ಯಕ್ಕೆ ಸಂಬಂಧಿಸಿದ ನಲವತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. ಬಸವರಾಜ ಅವರ ಮೊದಲನೇ ತತ್ವಪದಗಳ ಸಂಕಲನವಾದ ಕಲ್ಯಾಣ ಗೀತ 1966 ರಲ್ಲಿ ಗದುಗಿನ ವಿಜಯ ಬುಕ್ ಡಿಪೋದವರು ಈ ಕೃತಿಯನ್ನು ಪ್ರಕಟಿಸಿದ್ದಾರೆ. ಗೀತಾ ಭಾರತಿ ಎಂಬ ಎರಡನೇ ಕವನ ಸಂಕಲನವಾದ 1984 ರಲ್ಲಿ ಇದೇ ಪ್ರಕಾಶನದವರು ಪ್ರಕಟಣೆಯನ್ನು ಮಾಡಿದರು. ಬಸವಧ್ಯಾನ ಚಿಂತಾಮಣಿ ಎಂಬ ಹಾಡಿನ ಕೃತಿಯನ್ನು 1992 ರಲ್ಲಿ ಜಗದ್ಗುರು ಕುದರಿಮೋತಿ ಮೈಸೂರು ಮಠ ಸಂಸ್ಥಾನದವರು ಪ್ರಕಟಣೆಮಾಡಿ ದಿನಾಂಕ 08–02–1992 ರ ರವಿವಾರ ಬಸವ ಮಹಾಪುರಾಣದಲ್ಲಿ ಈ ಕೃತಿಯನ್ನು ಬಿಡುಗಡೆ ಮಾಡಿದರು. ಹೀಗೆ ಅನೇಕ ತತ್ವಪದಗಳ ಸಂಕಲನವನ್ನು ಪ್ರಕಟಿಸಿರುವ ತಾಳಕೇರಿ ಬಸವರಾಜ ಅವರ ಹಾಡುಗಳು ಸರಳವಾಗಿ ಮತ್ತು ತಾತ್ವಿಕವಾಗಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಅವರು ಬರೆದಿರುವಂತಹ ಮೂವತ್ತಕ್ಕೂ ಅಧಿಕ ಕೃತಿಗಳಾದ 1) ಯಡೆಯೂರ ಸಿದ್ದಲಿಂಗೇಶ್ವರ ಪ್ರಾರ್ಥನೆ 2) ಶ್ರೀ ಗವಿಸಿದ್ದೇಶ್ವರ ನೂರೆಂಟು ನಾಮಾವಳಿ 3) ಶ್ರೀ ಗುರು ಸ್ಮರಣೆ 4) 63 ಮಂದಿ ಶಿವಶರಣೆಯರ ಪುಣ್ಯಸ್ಮರಣೆ 5) ರೇಣುಕಾ ದೇವಿಯ ನಾಮಾವಳಿ 6) ಅಕ್ಕಮಹಾ ದೇವಿಯ ಲಾವಣಿಗಳು 7) ಶ್ರೀ ಹೇಮರೆಡ್ಡಿ ಮಲ್ಲಮ್ಮನ ಲಾವಣಿಗಳು 8) ಶ್ರೀ ಗುರು ಸಿದ್ದೇಶ್ವರ 9) ಶ್ರೀ ಬಸವೇಶ್ವರ ಲಾವಣಿಗಳು 10) ಶ್ರೀ ಗುರು ಸಿದ್ದೇಶ್ವರ ಉದಯಗೀತೆ 11) ಶ್ರೀ ಗವಿಸಿದ್ದೇಶ್ವರ ಸುಪ್ರಭಾತ 12) ಗರತಿ ಗಂಗಮ್ಮ ಚರಿತ್ರಗೀತ 13) ಬಸವಭಾನು ಭಾವಗೀತ 14) ಸತಿಸಾಧ್ವ ಶಾಂತಮ್ಮ ಚರಿತ್ರಗೀತ 15) ಕಿತ್ತೂರು ಚನ್ನಮ್ಮ ಲಾವಣಿಗೀತ 16) ಸಂಗೊಳ್ಳಿ ರಾಯಣ್ಣ ಲಾವಣಿಗಳು 17) ತಾಯಿಯ ಹಾಡು ಜನಪದ ಗೀತೆ 18) ಗೀತಗಂಗಾ ಜನಪದಗೀತೆ 19) ಹಾಡೋಣ ಬಾ ತಂಗಿ ಜನಪದ ಗೀತೆ 20) ಗೀತಭಾರತಿ ಭಕ್ತಿಗೀತೆ 21) ಕಲ್ಯಾಣಗೀತೆ 22) ಶ್ರೀ ಸಿದ್ದಲಿಂಗೇಶ್ವರ ನಾಮ ಸಂಕೀರ್ತನ 23) ಬಸವಗೀತೆ 24) ಜೈ ಸಂತೋಷಿ ಮಾತಾ 25) ಬಸವಧ್ಯಾನ ಚಿಂತಮಣಿ 26) ಶ್ರೀ ಬಸವೇಶ್ವರ ಭಕ್ತಿಗೀತೆ 27) ಶ್ರೀ ಪಾರ್ವತಿ ಸ್ತೋತ್ರ ಗೀತೆ 28) ಜನಪ್ರೀಯ ಜನಪದ ಗೀತ ಸಂಗಮ 29) ರಂಗೋಲಿ 30) ಶ್ರೀ ಗುರು ಪಂಚಾಕ್ಷರ ಸ್ತೋತ್ರ ಗೀತೆ ಹಾಗೂ ಇವರ ಪ್ರಮುಖ ನಾಟಕಗಳಾದ 1) ಮಹಾಸತಿ ಪುಲೋಮೆ 2) ಅನಾರಕಲಿ 3) ಕಂಬಳಿ ನಾಗಯ್ಯ 4) ಅಕ್ಕ ಮಹಾದೇವಿ 5) ಮಿತ್ರ ರತ್ನ 6) ಸಹೋದರನ ಸತಿ 7) ಸರ್ವಮಂಗಳ 8) ಶಿವಶರಣ ಲಿಂಗಣ್ಣ (ಜೀವನ ಚರಿತ್ರೆ) 9) ಕಲಾವಿದನ ಕಥೆ (ಜೀವನ ಚ–ರಿತ್ರೆ) ಈ ಎಲ್ಲಾ ಕೃತಿಗಳ ಮಾಹಿತಿಯು ಬಸವಧ್ಯಾನ ಚಿಂತಾಮಣಿ ಎಂಬ ಪುಸ್ತಕದ ಕೊನೆಯಲ್ಲಿ ಕೃತಿಗಳ ಮಾಹಿತಿ ದೊರಕಿದ್ದಾವೆ. ಹೀಗೆ ತಾಳಕೇರಿ ಬಸವರಾಜರವರು ಬರೆದ ಕೃತಿಗಳು ಜಾನಪದ ಲಯದಿಂದ ಕೂಡಿ ತಾವು ಬದುಕಿನಲ್ಲಿ ಕಂಡುಕೊಂಡ ಅನುಭವಗಳನ್ನು ಪ್ರಕೃತಿ ಚಿತ್ರಣ, ಜೀವನದ ಮೌನ ಸಂದೇಶ, ತಾಯಿಯ ಮಮತೆ, ಕನ್ನಡ ನಾಡಿನ ಹಿರಿಮೆ ಗರಿ, ಕನ್ನಡ ಭಾಷೆಯ ಸತ್ವವನ್ನು ಜಾನಪದ ಧಾಟಿಯಲ್ಲಿ ಅತ್ಯುತ್ತಮವಾಗಿ ಕಟ್ಟಿಕೊಟ್ಟಿದ್ದಾರೆ. ಹೀಗೆ ಅವರ ಸಾಹಿತ್ತಿಕ ಕೊಡುಗೆ ತತ್ವ ಪದಗಳನ್ನು ಅರ್ಥಗರ್ಭಿತವಾಗಿ ತಮ್ಮಲ್ಲಿ ಅಡಗಿಕೊಂಡಿದ್ದ ಜೀವನದ ಮೌಲ್ಯ, ನೀತಿಪಾಠ, ಆದರ್ಶ ಪ್ರೀಯತೆ, ಬದುಕಿನ ಬಗೆಗೆ ತುಂಬಾ ಸೊಗಸಾಗಿಕಟ್ಟಿಕೊಟ್ಟು ಕನ್ನಡ ಅಮ್ಮನ ಸೇವೆಗೆ ಪಾತ್ರರಾಗಿದ್ದಾರೆ.

**ಆಕರ ಗ್ರಂಥಗಳು**

1. ಆಶುಕವಿ ತಾಳಕೇರಿ ಬಸವರಾಜ, 'ಕಲ್ಯಾಣ ಗೀತಾ' ವಿಜಯ ಬುಕ್ ಡಿಪೊ ಗದಗ, 1966
2. ಆಶುಕವಿ ತಾಳಕೇರಿ ಬಸವರಾಜ, 'ಬಸವಧ್ಯಾನ ಚಿಂತಾಮಣಿ' ಜಗದ್ಗುರು ಶ್ರೀ ವಿಜಯ ಮಹಾಂತ ಸ್ವಾಮಿಗಳು ಕುದರಿಮೋತಿ, 1992
3. ದಸ್ತಗೀರಸಾಬ್ ದಿನ್ನಿ, 'ತಾಳಕೇರಿ ಬಸವರಾಜ' ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಭವನ ಬೆಂಗಳೂರು, 2012
4. ಬಸವರಾಜ ಸಬರದ 'ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳು' ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ, 2013

**ವಕ್ತೃವಿವರ**

1. ಶರಣು ಪ್ರಸಾದ್ ಗವಾಯಿ, ತಾಳಕೆರಿ ಬಸವರಾಜರವರ ಮಗ, ವಯಸ್ಸು 45, ತಾಳಕೇರಿ ಗ್ರಾಮ, ಯಲಬುರ್ಗಾ ತಾಲೂಕು, ಕೊಪ್ಪಳ ಜಿಲ್ಲೆ.